ಅಧ್ಯಕ್ಷರು : ಒಂದು ಪ್ರಕಟಣೆ ಇದೆ.

9. ಪ್ರಕಟಣೆ

"ದಿನಾಂಕ:14.02.2013ರಂದು ಸಮಯ 12.40 ಗಂಟೆಗೆ ಕರ್ನಾಟಕ ಜಾಗೃತ ಆಂದೋಳನ ಹಾಗೂAll India Freedom Fightersಸಮಿತಿ ಮತ್ತುKill Corruption, Save India Forumನಸದಸ್ಯರುಗಳಾದ ಈ ಕೆಳಕಂಡ 6 ಜನರು ಪ್ರೇಕ್ಷಕರ ವೇದಿಕೆಯಿಂದ ಘೋಷಣೆ ಕೂಗಿರುತ್ತಾರೆ. ಅವರುಗಳನ್ನು ತಕ್ಷಣ ಮಾರ್ಷಲ್ ಸಿಬ್ಬಂದಿ ವಶಕ್ಕೆ ತೆಗೆದುಕೊಂಡಿರುತ್ತಾರೆ. ಜಯಕುಮಾರ್ ಹಿರೇಮಠ (53 ವರ್ಷಗಳು), ನಾಗರಬಾವಿ, ಬೆಂಗಳೂರು, ಎಸ್.ಭಾಸ್ಕರನ್, (38 ವರ್ಷಗಳು) ರಾಜಾಜಿನಗರ, ಬೆಂಗಳೂರು, ಆರ್.ಎಸ್.ಶಿವಕುಮಾರ್ (40 ವರ್ಷಗಳು), ವಿ.ಚನಕರಾಜು (52 ವರ್ಷಗಳು),ಕೆ.ರವಿ (46 ವರ್ಷಗಳು), ಝೋವಿಯರ್ ದೀಪಕ್ (35 ವರ್ಷಗಳು), ಈ ಕೃತ್ಯವು ಪ್ರೇಕ್ಷಕರ ವೇದಿಕೆಯ ನಿಯಮಗಳ ಉಲ್ಲಂಘನೆ ಅಥವಾ ಅಸಭ್ಯ ವರ್ತನೆ, ಸಭಾನಿಂದನೆಯಾಗಿದ್ದರಿಂದ ಈ ತಪ್ಪಿಗಾಗಿ ಜೈಲು ಶಿಕ್ಷೆ ವಿಧಿಸಬಹುದಾಗಿದೆ. ವಿಧಾನಸಭೆಯ ಮಾನ್ಯ ಸದಸ್ಯರು ಇನ್ನು ಮುಂದೆ ಪ್ರೇಕ್ಷಕರ ವೇದಿಕೆಗೆ ಪ್ರವೇಶ ಪತ್ರಗಳನ್ನು ನೀಡಲು ಶಿಫಾರಸ್ಸು ಮಾಡುವ ಮುನ್ನ ಅಂಥ ವ್ಯಕ್ತಿಗಳ ನಡವಳಿಕೆಗಳನ್ನು ಅರಿತು ಹಾಗೂ ಪ್ರೇಕ್ಷಕರ ವೇದಿಕೆಯಲ್ಲಿ ಸಭ್ಯ ರೀತಿಯಲ್ಲಿ ವರ್ತಿಸಲು ತಿಳುವಳಿಕೆ ನೀಡಬೇಕೆಂದು ಕೋರುತ್ತೇನೆ.

ಇನ್ನು ಮುಂದೆ ಇಂಥ ಘಟನೆಗಳು ಮರುಕಳಿಸಿದ ಪಕ್ಷದಲ್ಲಿ ಗಂಭೀರವಾಗಿ ಪರಿಗಣಿಸಿ, ಅವರಿಗೆ ಉಗ್ರ ಶಿಕ್ಷೆ ವಿಧಿಸಲಾಗುವುದು. ಮೇಲ್ಕಂಡ ವ್ಯಕ್ತಿಗಳನ್ನು ಪಹರೆ ಹಾಗೂ ನಿಗಾವಣೆ ಪಡೆಯವರು ಈ ದಿನದ ಸಭೆ ಮುಗಿಯುವವರೆಗೂ ತಮ್ಮ ವಶದಲ್ಲಿಟ್ಟುಕೊಂಡಿದ್ದು, ಸದನದ ಕಲಾಪಗಳು ಮುಗಿದ ನಂತರ ಅವರಿಗೆ ತೀವ್ರವಾದ ಎಚ್ಚರಿಕೆಯನ್ನು ನೀಡಿ ಬಿಡುಗಡೆಗೊಳಿಸಲು ಮಾರ್ಷಲ್‌ರವರ ಮೂಲಕ ಆದೇಶ ನೀಡುತ್ತಿದ್ದೇನೆ.

10. ಶಾಸನ ರಚನೆ

ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ

1. ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ವಿಧೇಯಕ, 2013.